**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ**

**ಸಿಸಿ ನಂಬ್ರಃ 536/2018** **ಸಿಡಬ್ಲ್ಯೂ - 6**

**ಪಿಡಬ್ಲ್ಯೂ - 4**

ಸಾಕ್ಷಿದಾರರ ಹೆಸರು ಃ ಶ್ರೀ ಚಂದ್ರಶೇಖರ ಶೆಟ್ಟಿ
ಗಂಡನ ಹೆಸರು ಃ ಆನಂದ ಶೆಟ್ಟಿ
ಪ್ರಾಯ ಃ 65 ವರ್ಷ
ಉದ್ಯೋಗ ಃ ಅಂಗಡಿ
ವಾಸ ಃ ಹೊಸೂರು

ದಿನಾಂಕಃ 28-12-2022 ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾಸಾ-1, 4 ಮತ್ತು 5 ನನ್ನ ಹೆಂಡತಿಯ ತಂಗಿಯಂದಿರು. ಚಾಸಾ-2 ಮತ್ತು 3 ನನ್ನ ಸಂಬಂಧಿಕರು. ನ್ಯಾಯಾಲಯದ ಮುಂದೆ ಆರೋಪಿಯ ಪರಿಚಯವಿದೆ. ಆರೋಪಿ ಮತ್ತು ಚಾಸಾ-1 ರವರ ನಡುವೆ ಗಲಾಟೆಯಾದ ವಿಚಾರ ನನಗೆ ಗೊತ್ತಿದೆ. ದಿಃ 28-04-2018 ರಂದು ಸಂಜೆ 4-25 ಗಂಟೆಗೆ ಗಲಾಟೆಯಾಗಿದೆ. ಗಲಾಟೆಯಾದ ದಿನ ನಾನು ನನ್ನ ಮನೆಯಲ್ಲಿ ಇದ್ದೆ. ಸಂಜೆ 4-45 ಗಂಟೆಗೆ ಚಾಸಾ-1 ರವರು ನನಗೆ ಫೋನ್ ಮಾಡಿ ಆರೋಪಿ ಚಾಸಾ-1 ರವರ ಮನೆಯಲ್ಲಿ ಗಲಾಟೆ ಮಾಡಿ ಚಾಸಾ-1 ರವರಿಗೆ ಹೊಡೆದಿರುತ್ತಾರೆ ಎಂದು ಚಾಸಾ-1 ರವರು ನನಗೆ ಹೇಳಿರುತ್ತಾರೆ. ವಿಷಯ ತಿಳಿಸಿದ ತಕ್ಷಣ ನಾನು ಬೆಳ್ವಾಳದಲ್ಲಿರುವ ಚಾಸಾ-1 ರವರ ಮನೆಗೆ ಹೋಗಿದ್ದೆ. ನಾನು ಅವರ ಮನೆಗೆ ಹೋದಾಗ ಚಾಸಾ-1 ರವರು ಆರೋಪಿಯ ರಿಕ್ಷಾದಲ್ಲಿ ಮಧ್ಯಾಹ್ನ 11 ಗಂಟೆಗೆ ಗೇರು ಬೀಜವನ್ನು ಬೆಳ್ವಾಳದಿಂದ ನೇರಳಕಟ್ಟೆಗೆ ತೆಗೆದುಕೊಂಡು ಹೋಗಿ ರಿಕ್ಷಾವನ್ನು ನೇರಳಕಟ್ಟೆಯ ಗೇರು ಬೀಜದ ಅಂಗಡಿಯ ಪಕ್ಕ ನಿಲ್ಲಿಸಲು ಹೇಳಿ ಗೇರುಬೀಜವನ್ನು ಮಾರಾಟ ಮಾಡಲು ಅಂಗಡಿಗೆ ಹೋಗಿ ಬರುವಾಗ ರಿಕ್ಷಾ ಅಲ್ಲಿ ಇಲ್ಲದ ಕಾರಣ ಅವರು ಅವರಿಗೆ ಫೋನ್ ಮಾಡಿದಾಗ ಅವರು ಫೋನನ್ನು ತೆಗೆದಿರುವುದಿಲ್ಲ. ಆದ ಕಾರಣ ಚಾಸಾ-1 ರವರು ಬೇರೆ ರಿಕ್ಷಾದಲ್ಲಿ ಮನೆಗೆ ವಾಪಸ್ಸು ಬಂದಿದ್ದರು ಎಂದು ಅವರು ನನ್ನಲ್ಲಿ ಹೇಳಿದ್ದರು. ಸಂಜೆ 4-25 ಗಂಟೆಗೆ ಆರೋಪಿ ಚಾಸಾ-1 ರವರ ಮನೆಗೆ ಬಂದು, ನಾನು ನಿನ್ನನ್ನು ಕಾಯುತ್ತಾ ಇದ್ದೆ, ನೀನು ಬೇರೆ ರಿಕ್ಷಾ ಮಾಡಿಕೊಂಡು ವಾಪಸ್ಸು ಬಂದೆ ನನಗೆ ರೂಪಾಯಿ 300 ಬಾಡಿಗೆ ಕೊಡು ಎಂದು ಹೇಳಿದಾಗ

ಚಾಸಾ-1 ರವರು ರೂಪಾಯಿ 250 ಕೊಡುತ್ತೇನೆ ಎಂದು ಹೇಳಿದಾಗ ಆರೋಪಿಯು ಏಕಾಏಕಿಯಾಗಿ ಚಾಸಾ-1 ರವರ ಹೊಟ್ಟೆಗೆ ತುಳಿದು ಅವರ ಕಪಾಲಕ್ಕೆ ಹೊಡೆದಿರುತ್ತಾರೆ. ಚಾಸಾ-1 ರವರು ಹೊಟ್ಟೆ ನೋವು ಮತ್ತು ಮುಖ ನೋವು ಇದೆ ಎಂದು ಹೇಳಿದ ಕಾರಣ ನಾನು ಮತ್ತು ಚಾಸಾ-4 ರವರು ಕುಂದಾಪುರದ ಶ್ರೀದೇವಿ ನರ್ಸಿಂಗ್ ಹೋಂಗೆ ಕರೆದುಕೊಂಡು ಹೋಗಿದ್ದೇವು. ಘಟನೆಯ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದು ಕೊಂಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ವಿನಂತಿಸಿಕೊಂಡಿದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು)**

**<u>ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

ಚಾಸಾ-2 ಮತ್ತು 3 ರವರು ಗಲಾಟೆಯನ್ನು ಬಿಡಿಸಿರುತ್ತಾರೆ ಮತ್ತು ಆಗ ಆರೋಪಿ ನೀನು ಜೀವಂತ ಇದ್ದರೆ ಕೊಲೆ ಮಾಡುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಮತ್ತು ಬೇವರ್ಶಿ ರಂಡೆ ಎಂದು ಅವಾಚ್ಯ ಶಬ್ದದಿಂದ ಬೈದು ಅವರು ಬಂದ ಕೆಎ-20-ಡಿ-6021 ರಿಕ್ಷಾದಲ್ಲಿ ವಾಪಸ್ಸು ಹೋಗಿದ್ದಾರೆ ಎಂದರೆ ಸರಿ. ಆರೋಪಿ ಮಾಡಿದ ಕೃತ್ಯದಿಂದ ಚಾಸಾ-1 ರವರಿಗೆ ಮಾನ ಹಾನಿ ಉಂಟಾಗಿದೆ ಎಂದರೆ ಸರಿ.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ. ಪಿ ಎಸ್ ರವರಿಂದ</u>**

ನಾನು ಹೊಸೂರಿನಲ್ಲಿ ವಾಸ್ತವ್ಯ ಇದ್ದೇನೆ. ನನ್ನ ಹೆಂಡತಿಯ ಮನೆ ಬೆಳ್ಳಾಳದಲ್ಲಿ ಇದೆ. ಹೊಸೂರಿನಿಂದ ನನ್ನ ಹೆಂಡತಿ ಮನೆಗೆ 3 ಕಿ.ಮೀ ದೂರವಿದೆ. ನಾನು ನಿವೃತ್ತ ಅಧ್ಯಾಪಕ. ನನಗೆ ಸಾಮಾನ್ಯ ಕಾನೂನಿನ ಜ್ಞಾನ ಇದೆ. ಯಾರಾದರೂ ಹಲ್ಲೆ ಮಾಡಿದರೆ, ಮಾನ ಹಾನಿ ಮಾಡಿದರೆ ತಕ್ಷಣ ಪೊಲೀಸರಿಗೆ ದೂರು ನೀಡಬೇಕು ಎಂಬ ಕಾನೂನಿನ ಮಾಹಿತಿ ಇದೆ.

ನನಗೆ ಚಾಸಾ-1 ರವರು 4-45 ಗಂಟೆಗೆ ಫೋನ್ ಮಾಡಿರುತ್ತಾರೆ. ನಾನು ಘಟನೆಯಾದ 5-15 ಗಂಟೆಗೆ ತಲುಪಿರುತ್ತೇನೆ. ಘಟನೆಯಾದ ದಿನವೇ ಪೊಲೀಸ್ ಠಾಣೆಗೆ ದೂರನ್ನು ನೀಡಲು ನಾನು ಸಲಹೆ ನೀಡಲಿಲ್ಲ ಎಂದರೆ ಸಾಕ್ಷಿಯು ಸ್ಥಳದಲ್ಲಿಯೇ ತೀರ್ಮಾನ ಮಾಡಿಕೊಳ್ಳುವ ಎಂದು ಸಲಹೆ ನೀಡಿಲ್ಲ ಎಂದು ನುಡಿದಿರುತ್ತಾರೆ. ಆಸ್ಪತ್ರೆಗೆ ಹೋಗುವಾ, ಚಿಕಿತ್ಸೆ ಕೊಡಿಸುವಾ ಎಂದು ಚಾಸಾ-1 ರವರಿಗೆ ಹೇಳಿದ್ದೆ. ಘಟನೆಯಾದ ದಿನವೇ ಕುಂದಾಪುರದ ಶ್ರೀದೇವಿ ನರ್ಸಿಂಗ್ ಹೋಂಗೆ ಕರೆದುಕೊಂಡು ಹೋಗಿರುತ್ತೇವೆ.

ಚಾಸಾ-1 ರವರಿಗೆ ಯಾವುದರಿಂದ ಮತ್ತು ಯಾರು ಹಲ್ಲೆ ಮಾಡಿದ್ದಾರೆ ಎಂದು ನಮ್ಮನ್ನು ವಿಚಾರಿಸಿ ಬರೆದುಕೊಂಡಿರುತ್ತಾರೆ. ಘಟನೆಯಾದ 2 ದಿನಗಳ ನಂತರ ನಾನೇ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇನೆ. 2 ನೇ ಬಾರಿ ಆಸ್ಪತ್ರೆಗೆ ಹೋದಾಗ ಯಾರಿಂದ ಹಲ್ಲೆಯಾಗಿದೆ ಎಂದು ವೈದ್ಯರಿಗೆ ಹೇಳಿಲ್ಲ. ಅವರು ಕೇಳಿದ್ದರೂ ಕೂಡ ನಾನು ಹೇಳಿರುವುದಿಲ್ಲ.

ಘಟನೆಯಾದ 2 ದಿನದ ನಂತರ ಕೊಲ್ಲೂರು ಪೊಲೀಸ್ ಠಾಣೆಗೆ ಹೋಗಿ ಘಟನೆ ಬಗ್ಗೆ ವಿಚಾರ ಹೇಳಿ ಕೇಸನ್ನು ನಾನು ದಾಖಲಿಸಿದ್ದೆ ಎಂದರೆ ಸರಿಯಲ್ಲ. ಈ ಘಟನೆಯ ಬಗ್ಗೆ ಪೊಲೀಸರು ನನ್ನನ್ನು ಚಾಸಾ-1 ರವರ ಮನೆಯಲ್ಲಿ ತನಿಖೆ ಮಾಡಿದ್ದಾರೆ. ಯಾವ ದಿನ ನನ್ನನ್ನು ವಿಚಾರಣೆ ಮಾಡಿದ್ದಾರೆ ಎಂದು ನೆನಪಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ. ಅವರು ಸ್ಥಳದಲ್ಲಿಯೇ ಬರೆದುಕೊಂಡಿರುತ್ತಾರೆ. ಸುಳ್ಳು ಪ್ರಕರಣವಾದ ಕಾರಣ ಘಟನೆಯಾದ ದಿನವೇ ಪೊಲೀಸ್ ಠಾಣೆಗೆ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣವೇಂದು ಗೊತ್ತಿದ್ದರೂ ಕೂಡ ಹೆಂಡತಿಯ ಮನೆಯವರ ಒತ್ತಾಯಕ್ಕೆ ಒಳಗಾಗಿ ಅವರ ಪರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯು ಚಾಸಾ-1 ರವರ ಮನೆಗೆ ಅಕ್ರಮ ಪ್ರವೇಶ ಮಾಡಿರುವುದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಮಾನ ಹಾನಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓದಿ ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ